1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 733 /2019 ಚಾಸಾಃ(4) ಪ್ರಾಸಾ ( 2 )

ದಿನಾಂಕಃ 11-03-2026 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಈರಪ್ಪ |
| ತಂದೆ ಹೆಸರು | ಹಿರೇಹನಮಪ್ಪ ಚುಕನಿ |
| ವಯಸ್ಸು | 59 ವರ್ಷ, |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನೆಲಜೇರಿ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ಚಾಸಾ-1 ರವರ ಪತಿ. 4ನೇ ಆರೋಪಿ ನನ್ನ ತಂಗಿಯ ಓರಗಿತ್ತಿ. 2ನೇ ಆರೋಪಿ ಚಾಸಾ-1 ರವರ ಮಾವ. 3ನೇ ಆರೋಪಿ ಚಾಸಾ-1 ರವರ ಮೈದುನ. 2001 ರಲ್ಲಿ ಚಾಸಾ-1 ನನ್ನ ತಂಗಿಯನ್ನು 1ನೇ ಆರೋಪಿಯ ಜೊತೆಗೆ ಮದುವೆ ಮಾಡಿ ಕೊಡಲಾಗಿತ್ತು, ಸದರಿ ಸಂಸಾರಿಕ ಜೀವನದಿಂದ ಚಾಸಾ-1 ರವರಿಗೆ 2003 ರಲ್ಲಿ ಒಂದು ಹೆಣ್ಣು ಮಗು ಜನಿಸಿರುತ್ತದೆ. 2002 ರಲ್ಲಿ 1ನೇ ಆರೋಪಿ ಸಾಮವ್ವ ಎಂಬ ಮುಸ್ಲಿಂ ಮಹಿಳೆಯೊಂದಿಗೆ ಅನೈತಿಕ ಸಂಬಂದ ಹೊಂದಿದ್ದ, ನಂತರ 1ನೇ ಆರೋಪಿಯೊಂದಿಗೆ ಸದರಿ ಮುಸ್ಲಿಂ ಮಹಿಳೆಯೊಂದಿಗೆ ಕಾಮಧೇನು ಮಹಿಳಾ ಸಂಘದವರು ಮದುವೆ ಮಾಡಿಸಿರುತ್ತಾರೆ. ನಂತರ 1ನೇ ಆರೋಪಿ ತನ್ನ ತಾಯಿ ಹಾಗೂ ಮುಸ್ಲಿಂ ಮಹಿಳೆಯೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದ ಮತ್ತು ಚಾಸಾ1 ಮತ್ತು ಅವಳಿಗೆ ಜನಿಸಿದ ಮಗುವಿಗೆ 1 ರಿಂದ 4ನೇ ಆರೋಪಿತರು ಕಿರುಕುಳ ಕೊಡುತ್ತಾ ಬಂದಿರುತ್ತಾರೆ, ಚಾಸಾ-1 ರವರು ಪ್ರತ್ಯೇಕ ಒಂದು ಕೋಣೆಯಲ್ಲಿ ವಾಸವಾಗಿರುತ್ತಾಳೆ. ಈ ವಿಷಯವಾಗಿ ಸಾಕಷ್ಟು ಗುರುಹಿರಿಯ ಮುಂದೆ ಸಾಕಷ್ಟು ರಾಜಿ ಪಂಚಾಯತಿ ಮಾಡಿಸಿರುತೇನೆ. ಆದರೂ ಸಹ ಆರೋಪಿತರು ಚಾಸಾ-1 ರವರಿಗೆ ಕಿರುಕುಳ ಕೊಡುವವುದನ್ನು ನಿಲ್ಲಿಸಿರಲಿಲ್ಲ. ದಿನಾಂಕಃ 4-5-2019 ರಂದು ಬೆಳಿಗ್ಗ 10 ಗಂಟೆಗೆ ನನ್ನ ತಂಗಿಯ ಮಗಳು ಊಟ ಮಾಡುವಾಗ ಮುಸುರಿ ಚೆಲ್ಲಿದ್ದಕ್ಕೆ ನಿನಗೆ ಬುದ್ದಿವಾದ ಹೇಳಲು ಬರುವುದಿಲ್ಲವೆಂದು 1ನೇ ಆರೋಪಿಯು ಚಾಸಾ-1 ರವರಿಗೆ ಏನಲೇ ಸೂಳೆ ನೀನು ನಮ್ಮ ಆಸ್ತಿಯಲ್ಲಿ ಪಾಲು ಕೇಳುತ್ತಿಯೇನಲೇ ಮತ್ತು ನಿನ್ನ ಮಗಳು ನಮ್ಮ ಮನೆಯ ಅಂಗಳದಲ್ಲಿ ಮುಸುರಿ ಚೆಲ್ಲಿರುತಾಳೆ ಅವಳಿಗೆ ಚಲ್ಲಬೇಡ ಎಂದು ಹೇಳಲು ಬರುವುದಿಲ್ಲವೇ ಎಂದು ಅವಾಚ್ಯವಾಗಿ ಬೈದು, ಕೈಯಿಂದ ಹೊಡಿ ಬಡಿ ಮಾಡಿ ನಾಲ್ಕೂ ಜನ ಆರೋಪಿತರು ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿರುತ್ತಾರೆ. ಸದರಿ ಜಗಳವನು ಚಾಸಾ-5 ಮತ್ತು 6 ರವರು ಬಿಡಿಸಿರತ್ತಾರೆ. ನಂತರ ಮರಳಿ ಹೋಗವಾಗ ಚಾಸಾ1 ರವರಿಗೆ ಮತ್ತು ಅವಳ ಮಗಳಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ-1 ರವರು ನಮ್ಮ ಮನೆಗೆ

ಮದ್ಯಾಹ್ನ 12-30 ಕ್ಕೆ ಬಂದು ತಿಳಿಸಿರುತ್ತಾಳೆ. ಈ ಸಂಬಂದ ಚಾಸಾ-1 ರವರು ದೂರು ದಾಖಲಿಸಿದ್ದು ಸದರಿ ದೂರನ್ನು ಚಾಸಾ-1 ರವರು ಹೇಳಿದಂತೆ ನಾನೇ ಬರೆದುಕೊಟ್ಟಿರುತ್ತೇನೆ ಮತ್ತು ನನ್ನ ಹೇಳಿಕೆ ಯನ್ನು ಪೋಲೀಸರಿಗೆ ನೀಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯಾವಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.